ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 : ದಿನಾಂಕ : 10–09–2018

# ಪತ್ರಿಕಾ ಆಮಂತ್ರಣ

## 1) ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ–2018:

ಮುಖ್ಯ ಅತಿಥಿ:
ಆರ್. ಶಂಕರ್,
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು

ದಿನಾಂಕ: 11–09–2018, ಮಂಗಳವಾರ, ಸಮಯ: ಬೆಳಿಗ್ಗೆ 10–00 ಗಂಟೆಗೆ
ಸ್ಥಳ: ಅರಣ್ಯ ಭವನ, 18 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು

ವಿ.ಸೂ. ಈ ಕಾರ್ಯಕ್ರಮಕ್ಕೆ ವಾಹನವು ವಾರ್ತಾ ಸೌಧದಿಂದ ಬೆಳಿಗ್ಗೆ 9–15 ಗಂಟೆಗೆ ಅರಣ್ಯ ಭವನಕ್ಕೆ ಹೊರಡಲಿದೆ.
ಮಾಧ್ಯಮ ಸಮನ್ವಯ: ಶ್ರೀ ಎಲ್. ಮಂಜುನಾಥ್, ಉಪ ವಲಯ ಅರಣ್ಯಾಧಿಕಾರಿ
98866 32327

## 2) ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯದ ಉದ್ಘಾಟನಾ ಸಮಾರಂಭ:

ಉದ್ಘಾಟನೆ:
ಎನ್.ಹೆಚ್. ಶಿವಶಂಕರ್ ರೆಡ್ಡಿ,
ಕೃಷಿ ಸಚಿವರು ಹಾಗೂ ಕುಲಾಧಿಪತಿಗಳು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಅಧ್ಯಕ್ಷತೆ:
ಕೃಷ್ಣ ಭೈರೇಗೌಡ,
ಗ್ರಾಮೀಣಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ದಿನಾಂಕ: 11–09–2018, ಮಂಗಳವಾರ, ಸಮಯ: ಬೆಳಿಗ್ಗೆ 11–00 ಗಂಟೆಗೆ

**ಸ್ಥಳ: ಕುವೆಂಪು ಸಭಾಂಗಣ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ ಆವರಣ, ಹೆಬ್ಬಾಳ, ಬೆಂಗಳೂರು**

**3) ಪತ್ರಿಕಾಗೋಷ್ಠಿ:**

**ಆರ್.ವಿ. ದೇಶಪಾಂಡೆ,**
**ಕಂದಾಯ ಸಚಿವರು**

**ದಿನಾಂಕ: 11-09-2018 ಮಂಗಳವಾರ ಸಮಯ: ಮಧ್ಯಾಹ್ನ 1-00 ಗಂಟೆಗೆ**
**ಸ್ಥಳ: ಕೊಠಡಿ ಸಂಖ್ಯೆ 313, ವಿಧಾನ ಸೌಧ, ಬೆಂಗಳೂರು**

**ಸಂಖ್ಯೆ: 976/1077**

**<u>ಪತ್ರಿಕಾ ಪ್ರಕಟಣೆ</u>**

# ಎಸಿಬಿ ದಾಳಿ

**ಬೆಂಗಳೂರು, ಸೆಪ್ಟೆಂಬರ್ 10 (ಕರ್ನಾಟಕ ವಾರ್ತೆ) :**

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗದ ವತಿಯಿಂದ ಸಾರ್ವಜನಿಕ ಸಂಪರ್ಕ ಸಭೆಯನ್ನು ಜಂಟಿ ಆಯುಕ್ತರು (ದಕ್ಷಿಣ) ರವರ ಕಛೇರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಯನಗರ, ಬೆಂಗಳೂರು ಇಲ್ಲಿ ದಿನಾಂಕ; 11-09-2018 ರಂದು ಬೆಳಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆಯ ವರೆಗೆ ಆಯೋಜಿಸಲಾಗಿದೆ.

ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿ ಈ ಸಭೆಯಲ್ಲಿ ಹಾಜರಿದ್ದು, ಸಾರ್ವಜನಿಕರಿಂದ ಸರ್ಕಾರದ ಕೆಲಸಗಳಲ್ಲಿ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟ ದೂರು ಅರ್ಜಿಗಳನ್ನು ಸ್ವೀಕರಿಸಲಿದ್ದಾರೆ. ಸಾರ್ವಜನಿಕರು ಈ ಸಭೆಗೆ ಹಾಜರಾಗಿ ತಮ್ಮ ದೂರುಗಳನ್ನು ನೀಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಬಿ.ಬಾಲರಾಜು, ಪೊಲೀಸ್ ಉಪಾಧೀಕ್ಷಕರು, (ಮೊಬೈಲ್ ನಂ.9480806215) ಮತ್ತು ಚಂದ್ರಪ್ಪ ಎಸ್.ಎಂ, ಪೊಲೀಸ್ ನಿರೀಕ್ಷಕರು (ಮೊಬೈಲ್ ನಂ.9480806262) ಇವರನ್ನು ಸಂಪರ್ಕಿಸಲು ಕೋರಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಈರುಳ್ಳಿಯಲ್ಲಿ ಸಸ್ಯ ಸಂರಕ್ಷಣೆ

**ಈರುಳ್ಳಿ ಸಸ್ಯ ಸಂರಕ್ಷಣೆ ಕುರಿತು ತೋಟಗಾರಿಕೆ ಇಲಾಖೆ ಕೆಳಕಂಡಂತೆ ಕ್ರಮಗಳನ್ನು ಸೂಚಿಸಿದೆ.**

**ನೇರಳೆ ಎಲೆ ಮಚ್ಚೆ ರೋಗ (ಈರುಳ್ಳಿ ಪರ್ಪಲ್ ಬ್ಲಾಚ್):**

- ಈ ರೋಗದ ಲಕ್ಷಣ ಎಲೆ ತುದಿಭಾಗದಲ್ಲಿ ಸಣ್ಣಬಿಳಿ ಮಚ್ಚೆಯಿಂದ ಪ್ರಾರಂಭವಾಗಿ ಬೆಳೆದಂತೆಲ್ಲಾ ದುಂಡಾಕಾರಾವಾಗಿ ಕಾಣಿಸುತ್ತದೆ. ನಂತರ ನೇರಳೆ ಭಾಗಕ್ಕೆ ಪರಿವರ್ತನೆಗೊಂಡು, ಎಲೆಗಳು ಒಣಗುತ್ತವೆ.
- 2 ಗ್ರಾಂ ಕ್ಲೋರೊಥಲೋನಿಲ್ (ಕವಚ್) ಅಥವಾ 2 ಗ್ರಾಂ ಮ್ಯಾಂಕೋಜೆಬ್ ಅಥವಾ 1.5 ಗ್ರಾಂ ಸ್ಕೋರ್ ಅಥವಾ 2.5 ಗ್ರಾಂ ಕಾಪರ್ ಆಕ್ಸಿಕ್ಲೋರೈಡ್ ಈ ಶೀಲಿಂಧ್ರ ನಾಶಕಗಳ ಜೊತೆ 0.25 ಮಿ.ಲೀ ಟ್ರೈಟಾನ್/ಸ್ಯಾಂಡೋವಿಟ್/ಟೀಪಾಲ್ ನ್ನು ಒಂದು ಲೀಟರ್ ನೀರಿನೊಂದಿಗೆ ಸೇರಿಸಿ ಸಿಂಪಡಿಸಬೇಕು.
- ಜೈವಿಕ ಗೊಬ್ಬರಗಳಾದ ಟ್ರೈಕೋಡರ್ಮಾ ಹಾರ್ಜಿಯಾನಮ್/ವಿರಿಡೇ (2 ಕೆ.ಜಿ), ಸುಡೋಮಾನಾಸ್ ಫ್ಲೋರಸೆನ್ಸ್ (1 ಕೆ.ಜಿ) ಬಳಸುವುದು.



**ಬ್ಯಾಕ್ಟೀರಿಯಾ ಮೃದು ಕೊಳೆ ರೋಗ:**

- ಈರುಳ್ಳಿ ಬೆಳೆಯಲ್ಲಿ ಇತ್ತೀಚಿನ ದಿನಗಳಲ್ಲಿ ಬ್ಯಾಕ್ಟೀರಿಯಾದಿಂದ ಗಡ್ಡೆಕೊಳೆಯುವ ರೋಗವು ಅಲ್ಲಲ್ಲಿ ಕಂಡು ಬರುತ್ತಿದೆ. ಬಾದೆಗೊಳಗದ ಗಿಡದ ಕುತ್ತಿಗೆ ಭಾಗದಲ್ಲಿ ಮೃದುವಾಗಿ ಕೊಳೆತು ಕೆಟ್ಟವಾಸನೆ ಬರುತ್ತದೆ.
- ನಿಯಂತ್ರಿಸಲು ಕಾಪರ್ ಆಕ್ಸಿಕ್ಲೋರೈಡ್ 2.5 ಗ್ರಾಂ/ಲೀ ಹಾಗೂ ಸ್ಟ್ರೆಪ್ಟೋಸೈಕ್ಲಿನ್ 0.5 ಗ್ರಾಂ ಒಂದು ಲೀಟರ್ ನೀರಿಗೆ ಬೆರಸಿ ಸಿಂಪಡಿಸಬೇಕು.



**ನುಸಿ(ಥ್ರಿಪ್ಸ್):**

- ಎಲೆಯ ಸುಳಿಗಳಲ್ಲಿ ಮತ್ತು ಎಲೆಯ ಕೆಳಗೆ ಕುಳಿತು ರಸ ಹೀರುತ್ತವೆ. ಎಲೆಗಳ ಮೇಲೆ ಬಿಳಿ ಬಿಳಿಯಾದ ಮಚ್ಚೆಗಳು ಕಾಣಿಸುತ್ತವೆ ನಂತರ ತುದಿಯಿಂದ ಒಣಗುತ್ತವೆ.
- ನಾಟಿ ಮಾಡಿದ 3 ವಾರಗಳ ನಂತರ ಕಾರ್ಬರಿಲ್ 3ಗ್ರಾಂ, ಥೈಮಿಥೋಯೇಟ್ 1.7ಮಿ.ಲೀ ಅಥವಾ ಕಾನ್‌ಫೀಡಾರ್ 0.3 ಮಿ.ಲೀ ಅಥವಾ ಅಸಿಫೇಟ್ 1.7ಗ್ರಾಂ ನ್ನು ಪ್ರತಿ ಲೀಟರ್ ನೀರಿಗೆ ಮಿಶ್ರಮಾಡಿ ಸಿಂಪರಣೆ ಮಾಡಬೇಕು.
- ಟ್ರ್ಯಾಪ್‌ನ ಉಪಯೋಗ:

ಖಾಲಿ ಡಬ್ಬಗಳಿಗೆ ಹಳದಿ ಬಣ್ಣ ಬಳಿದು ಇದರ ಮೇಲೆ ಗ್ರೀಸ್ ಲೇಪಿಸಿ ಬೆಳೆಯ ಮೇಲೆ ಒಂದು ಅಡಿ ಎತ್ತರ ಇರುವ ಹಾಗೆ ನೇತು ಹಾಕ ಬೇಕು. ಹಾಗೂ ತೋಟದ ಸುತ್ತಲೂ ಎರಡು ಸಾಲುಗಳ ಮೆಕ್ಕೆಜೋಳ ಹಾಗೂ ಒಳಗಿನ ಒಂದು ಸಾಲಿನಲ್ಲಿ ಗೋಧಿ ಬೆಳೆಯುವುದರಿಂದ ಥ್ರಿಪ್ಸ್ ಕೀಟಗಳು ಗಾಳಿಯಿಂದ ಹರಡುವುದನ್ನು ತಡೆಯಬಹುದಾಗಿರುತ್ತದೆ ಎಂದು ತೋಟಗಾರಿಕೆ ಇಲಾಖೆಯ ಪ್ರಕಟಣೆ ತಿಳಿಸಿದೆ.  ಹೆಚ್ಚಿನ ಮಾಹಿತಿಗೆ



**ಹಾರ್ಟಿ ಕ್ಲಿನಿಕ್, ತೋಟಗಾರಿಕೆ ಮಾಹಿತಿ ಕೇಂದ್ರ. ದೂರವಾಣಿ ಸಂಖ್ಯೆ: 080-26577997 ಇವರನ್ನು ಸಂಪರ್ಕಿಸಬಹುದು.**